## PRAJAVANI

Date: September 27, 2014 | Page: 03
Edition: Mysore | Language: Kannada



ಮೈಸೂರಿನ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ನಿರ್ವಹಣಾ ಮತ್ತು ಅಭಿವೃದ್ಧಿ ಸಂಸ್ಥೆಯಲ್ಲಿ ಉದ್ಯಮವರ್ಗದವರಿಗಾಗಿ ಆಯೋಜಿಸಲಾಗಿದ್ದ ಚೆಸ್ ಟೂರ್ನಿ

# ಎಸ್‌ಡಿಎಂ ಚೆಸ್ ಬ್ಲಾಸ್ಟರ್: ಅಲ್ವಿನ್ ಮಿರಾಂಡಾಗೆ ಪ್ರಶಸ್ತಿ ಇತಿಹಾಸ

ಪ್ರಜಾವಾಣಿ ವಾರ್ತೆ

ಮೈಸೂರು: ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ಉದ್ಯೋಗಿ ಅಲ್ವಿನ್ ಮಿರಾಂಡಾ ವರು ಶ್ರೀಧರ್ಮಸ್ಥಳ ಮಂಜುನಾಥೇಶ್ವರ ನಿರ್ವಹಣಾ ಮತ್ತು ಅಭಿವೃದ್ಧಿ ಸಂಸ್ಥೆಯಲ್ಲಿ ಉದ್ಯಮವರ್ಗದವರಿಗಾಗಿ ನಡೆದ 'ಚೆಸ್ ಬ್ಲಾಸ್ಟರ್' ಚೆಸ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದರು.

ಈ ಟೂರ್ನಿಯಲ್ಲಿ ಅಕ್ಸೆಂಚುರಾದ ಬಿ.ಜಿ. ಪೂಬೇಶ್ ಮತ್ತು ಎಐಜಿಯ ಬಿ.ಅರ್. ಕಾರ್ತಿಕ್ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನಗಳಿಸಿದರು.

ಪ್ರತಿವರ್ಷ ನಡೆಸುವ ಈ ಸ್ಪರ್ಧೆಯು ಐ ಟಿ ಸಿ, ಟಿಸಿಎಸ್, ಎಸ್‌ಬಿಐ, ಜೆ.ಕೆ. ಟೈರ್ಸ್, ರಾಬರ್ಟ್ ಬಾಶ್, ಐಬಿಎಂ, ಎಐಜಿ ಮತ್ತು ಇತರ ಕಂಪೆನಿಗಳಿಂದ ಸ್ಪರ್ಧಿಗಳನ್ನು ಆಕರ್ಷಿಸಿತ್ತು.

ಡಾ.ಡಿ. ವೀರೇಂದ್ರ ಹೆಗ್ಗಡೆ ಅವರ ತಾಯಿ ದಿವಂಗತ ಡಿ. ರತ್ನಮ್ಮನವರ ನೆನಪಿಗಾಗಿ ಈ ಸ್ಪರ್ಧೆಯ ಸರಣಿಯನ್ನು ಕೆಲವು ವರ್ಷಗಳಿಂದ ಸಂಸ್ಥೆಯು ಆಯೋಜಿಸುತ್ತಿದೆ. ಕೆ.ವಿ. ಶ್ರೀಪಾದ್ ಮತ್ತು ವೈ.ಜಿ. ವಿಜಯೇಂದ್ರ ತೀರ್ಪುಗಾರರಾಗಿದ್ದರು.